

# ಚಿನ್ನದ ಹಬ್ಬ

ಅಕ್ಷಯ ತೃತೀಯ ಎಂಬ 'ಚಿನ್ನದ ಹಬ್ಬ' ಮತ್ತೆ ಬಂದಿದೆ. ಇದು ಚಿನ್ನ ಖರೀದಿಗೆ ಶುಭ ದಿನ ಎಂಬ ನಂಬಿಕೆಯೇ ಇಂದು ಚಿನ್ನದಂಗಡಿಗಳಲ್ಲಿ ಅತ್ಯಂತ ಹೆಚ್ಚಿನ ವಹಿವಾಟಿನ ದಿನವಾಗಿ ಮಾರ್ಪಾಡಾಗಲು ಕಾರಣವಾಗಿದೆ.

■ ಅವನೀಶ್



ಮೊನ್ನೆ ಮೊನ್ನೆ (ಏಪ್ರಿಲ್ ಎರಡನೇ ವಾರಾಂತ್ಯ) ಚಿನ್ನದಂಗಡಿಗಳಲ್ಲಿ ಒಡವೆ ಕೊಳ್ಳಲು ಮಹಿಳೆಯರ ಕ್ಯೂ. ಕಳೆದ ವರ್ಷ ಅಕ್ಷಯ ತೃತೀಯದ ದಿನ ಈ ರೀತಿಯ ಚಿನ್ನದ ಗ್ರಾಹಕರ ನೂಕುನುಗ್ಗಲು ಕಂಡಿದ್ದರಿಂದ ಓಹ್, ಈ ಸಲ 'ಅಕ್ಷಯ ತೃತೀಯ' ಬೇಗ ಬಂದಿದೆ ಎಂಬ ಸಂಶಯವೂ ಸುಳಿಯಿತು. ವಿಷಯ ಅದಲ್ಲ. ಅಂದು ಜಾಗತಿಕ ಮಟ್ಟದಲ್ಲಿ ಚಿನ್ನದ ಬೆಲೆಯ ಗ್ರಾಫ್ ಸರ್ರನೆ ಇಳಿದಿತ್ತು. ಚಿನ್ನ ಕೊಳ್ಳುವುದೇ ಗಗನಕುಸುಮ ಎಂದುಕೊಂಡಿದ್ದ ಮಹಿಳೆಯರು ಅಕ್ಷಯ ತೃತೀಯವರೆಗೆ ಕಾಯಲಿಲ್ಲ. ಒಂದು ಕಡೆ ಇನ್ನೂ ಬೆಲೆ ಇಳಿಯಬಹುದು ಎಂಬ ಆಸೆ, ಇನ್ನೊಂದೆಡೆ ನಾಳೆ ಮತ್ತೆ ಏರಿಕೆಯಾದರೇ ಎಂಬ ಆತಂಕ. ಹಾಗೋ ಹೀಗೋ ದುಡ್ಡು ಹೊಂದಿಸಿ ಸಾಧ್ಯವಾದಷ್ಟು ಖರೀದಿಸಿದರು. ಅಕ್ಷಯ ತೃತೀಯ ಎಂಬ 'ಚಿನ್ನದ ಹಬ್ಬ' ಹತ್ತಿರದಲ್ಲೇ ಇದ್ದರೂ ಬೆಲೆ ಕಡಿಮೆ ಎಂಬ ನೆಪದಿಂದ ಚಿನ್ನ ಖರೀದಿಸಿದವರ ಸಂಖ್ಯೆ ಲೆಕ್ಕವಿಲ್ಲ.

ಈಗ ಮತ್ತೆ ಚಿನ್ನದ ಬೆಲೆ ಚೇತರಿಸಿಕೊಂಡಿದೆ. ಅಕ್ಷಯ ತೃತೀಯಕ್ಕೆಂದು ಚಿನ್ನದ ಅಂಗಡಿ ಮಾಲೀಕರು ಹೊರತಂದಿದ್ದ ಹೊಸ ಹೊಸ ವಿನ್ಯಾಸಗಳು ಆಗಲೇ ಮಹಿಳೆಯರ ತಿಜೋರಿ ಸೇರಿಕೊಂಡಿದೆ. ಆದರೂ ಅಕ್ಷಯ ತೃತೀಯದಂದು ಖರೀದಿಸಿದ್ದು 'ಅಕ್ಷಯ ಪಾತ್ರೆ' ಅಂತೆ ಅಲ್ಲವೇ? ಈ ವರ್ಷ ಮೇ 13ರಂದು ಅಕ್ಷಯ ತೃತೀಯ. ಈ 'ಚಿನ್ನದ ಹಬ್ಬ' ವೈಶಾಖ ಶುಕ್ಲ ಪಕ್ಷದ ಮೂರನೇ ದಿನ ಬರುತ್ತದೆ.

ಈಗಾಗಲೇ ಅಕ್ಷಯ ತೃತೀಯದಂದು ಚಿನ್ನ ಖರೀದಿಗೆ ಬುಕಿಂಗ್ ಮಾಡುವವರು, ಕೊಳ್ಳಲು ಸಿದ್ಧತೆ ನಡೆಸಿದವರಿಗೆ ತಮ್ಮಲ್ಲಿರುವ 'ಹಳದಿ ಲೋಹ'ದ ಖಜಾನೆಗೆ ಇನ್ನಷ್ಟು ಸೇರಿಸುವ ತವಕ. ಪ್ರಮುಖ ಆಭರಣ ಕಂಪೆನಿಗಳಾದ ತಾನಿಷ್ಕ್, ಸ್ವರ್ಣ, ಆಭರಣ, ಗಂಜಾಂ, ಜಿಆರ್‌ಟಿ, ನೀಲಕಂಠ, ಕೃಷ್ಣಯ್ಯಚೆಟ್ಟಿ, ರಿಲಯನ್ಸ್, ನವರತನ್, ಜೋಯಾ ಆಲುಕ್ಕಾಸ್, ಪಿ.ಸಿ. ಚಂದ್ರ ಜ್ಯುವೆಲ್ಲರ್ಸ್ ಮುಂತಾದವು ಈಗಾಗಲೇ ಸಾಕಷ್ಟು ವೈವಿಧ್ಯಮಯ ಒಡವೆಯನ್ನು ತಂದಿದ್ದು, ಪೈಪೋಟಿ ನಡೆಸಿವೆ.

ಚಿನ್ನದ ನಾಣ್ಯಗಳು ಈಗ ಬ್ಯಾಂಕ್‌ಗಳಲ್ಲೂ ಲಭ್ಯ. ಹೂಡಿಕೆ ಮಾಡುವವರು ಚಿನ್ನದ ನಾಣ್ಯ, ಬಿಸ್ಕತ್‌ಗಳನ್ನು ಕೊಂಡು 'ಆಪದ್ಧನ'ವನ್ನು ಇಟ್ಟುಕೊಳ್ಳಬಹುದು.

**ಅಕ್ಷಯ ತೃತೀಯಕ್ಕೇ ಖರೀದಿ ಏಕೆ?**

ಅಕ್ಷಯ ತೃತೀಯ ಅತ್ಯಂತ ಶುಭ ದಿನ ಮತ್ತು ಮಂಗಳಕರ ಎಂದು ನಂಬಿಕೆ. ಹೀಗಾಗಿ ಅಂದು ಚಿನ್ನದಂತಹ ಅಮೂಲ್ಯ ವಸ್ತು ಖರೀದಿಸಿದರೆ ಫಲಪ್ರದ ಮತ್ತು ಸಮೃದ್ಧಿ ಉಂಟಾಗುತ್ತದೆ. ಹೆಚ್ಚಿನ ಸಂಪತ್ತು ತಂದುಕೊಡುತ್ತದೆ ಎಂಬುದು ಕೂಡ ನಂಬಿಕೆ. ಚಿನ್ನ ಅಭ್ಯುದಯ ಮತ್ತು ಏಳಿಗೆಯ ಪ್ರತೀಕ. ಈ ದಿನ ಖರೀದಿಸಿದ ಚಿನ್ನ ಮತ್ತು ಧರಿಸಿದ ಚಿನ್ನ ಕರಗುವುದಿಲ್ಲ ಎಂಬುದು ಕೂಡ ಅಂದು ಚಿನ್ನ ಖರೀದಿಸಲು ಕಾರಣ.

ಅಕ್ಷಯ ತೃತೀಯ ಮಂಗಳಕರ ದಿನವನ್ನು ಆಭರಣಕಾರರು ಕೂಡ ಆಚರಿಸುತ್ತಾರೆ. ಅಂದು ಚಿನ್ನಾಭರಣ, ಕುಂದನ, ವಜ್ರ ಮತ್ತಿತರ ಅಮೂಲ್ಯ ವಸ್ತುಗಳಿಂದ ಆಭರಣ ತಯಾರಿಸುತ್ತಾರೆ. ಸಾಂಪ್ರದಾಯಿಕ ಮನೋಭಾವದವರು ಲಕ್ಷ್ಮಿ, ದೇವಿ, ಗಣೇಶನ ಛಾಪು ಇರುವಂಥ ಚಿನ್ನದ ನಾಣ್ಯಗಳನ್ನು ಖರೀದಿಸುತ್ತಾರೆ.

ಅಕ್ಷಯ ತೃತೀಯಕ್ಕೆ ನಿರ್ದಿಷ್ಟವಾದ ವಿನ್ಯಾಸ, ದೇವಾನುದೇವತೆಗಳ ಚಿತ್ರವಿರುವ ಆಭರಣಗಳನ್ನು ತಯಾರಿಸಲಾಗುತ್ತದೆ, ಸೂರ್ಯ, ಆಕಾಶಕಾಯಗಳ ಚಿತ್ರವನ್ನೂ ಒಳಗೊಂಡಿರುತ್ತವೆ.

ಉತ್ತರ ಭಾರತದಲ್ಲಿ ಈಗಲೂ ಅಕ್ಷಯ ತೃತೀಯದ ಆಭರಣಗಳು ಮೊಘಲ್ ಸಮಯದ ಆಭರಣಗಳಿಂದ ಪ್ರೇರಿತವಾಗಿರುತ್ತದೆ. ಈ ಆಭರಣಗಳಲ್ಲಿ ಅಲಂಕಾರಿಕ ಮಾದರಿಗಳೂ ಇರುತ್ತವೆ. ಇದರಲ್ಲಿ ಬಾಹ್ಯ ಪಿಂಗಾಣಿ ಚೂರು ಲೇಪಿತ ಆಭರಣಗಳಿಂದ ಹಿಡಿದು ರತ್ನಗಲ್ಲುಗಳಿಂದ ಕೂಡಿದ ಆಭರಣಗಳೂ ಇರುತ್ತವೆ. ಈ ಭಾಗದಲ್ಲಿ ಅಕ್ಷಯ ತೃತೀಯದಂದು ಮಾರುವ ಆಭರಣಗಳಲ್ಲಿ ವಜ್ರ, ಮಾಣಿಕ್ಯ, ಜೇಡ್, ಪೋಲ್ಕಿ, ಮುತ್ತು, ನೀಲ ಮಣಿಗಳು ಹೆಚ್ಚಾಗಿರುತ್ತವೆ.

'ಚಿನ್ನ ಎಂದಿಗೂ ಆಕರ್ಷಕ ಲೋಹವೇ. ಚಿನ್ನ ಹೂಡಿಕೆಯ ಒಂದು ಮಾರ್ಗ' ಎನ್ನುತ್ತಾರೆ ಪಿ.ಸಿ. ಚಂದ್ರ ಜ್ಯುವೆಲರ್ಸ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಸುರ್ವೋ ಚಂದ್ರ.

ಅಕ್ಷಯ ತೃತೀಯದ ದಿನ ಚಿನ್ನ ಖರೀದಿಸಿ. ಈ ಬಾರಿ ಅದೃಷ್ಟ ಲಕ್ಷ್ಮಿ ಒಲಿಯುವಳೇ ಕಾದು ನೋಡಿ.

(ಚಿತ್ರ ಕೃಪೆ: ಪಿ.ಸಿ. ಚಂದ್ರ ಜ್ಯುವೆಲ್ಲರ್ಸ್)